"ಹೌದು ಅಯ್ಯ. ನಾನು ಈ ಊರಿಗೆ ಬಂದಿರುವುದು ಇದೇ ಮೊದಲ ಬಾರಿ."

ಬಾಲೆ ಮಾತು ಮುಂದುವರಿಸುವ ಮುನ್ನ "ಹೊತ್ತು ಮೀರಿದೆ. ನಾವಿನ್ನೂ ಹೊರಡೋಣವೇ?" ಎಂದು ಅವಸರಿಸಿದಳು ಜೊತೆಯಲ್ಲಿದ್ದ ಸಖಿ.

ಅದೇ ಸಮಯ ನಾಲ್ಕು ಅಶ್ವಾರೋಹಿಣಿಯರ ನಡುವೆ ಗಡಿಬಿಡಿಯಿಂದ ಸಾಗಿ ಬಂದು ಗುಡಿಯ ಬಾಗಿಲಲ್ಲಿ ನಿಂತಿತು ಒಂದು ಪಲ್ಲಕ್ಕಿ. ಮುಂದಿದ್ದ ಕುದುರೆಯ ಮೇಲಿಂದ ಜಿಗಿದು ಇಳಿದ ಅಶ್ವಾರೋಹಿಣಿ ವೇಗವಾಗಿ ಗುಡಿಯೊಳಗೆ ನುಗ್ಗಿದಳು.

"ರಾಜಕುಮಾರಿ, ನಿಮ್ಮನ್ನ ಎಲ್ಲಕಡೆ ಹುಡುಕಿ, ಕೊನೆಗೆ ಇಲ್ಲಿಗೆ ಬಂದೆವು. ಬಹಳ ಹೊತ್ತಾಗಿಹೋಗಿದೆ. ಮಹಾರಾಣಿಯವರು ಬಹಳ ಆತಂಕದಿಂದ ಪಲ್ಲಕ್ಕಿಯನ್ನು ಕಳುಹಿಸಿಕೊಟ್ಟಿದ್ದಾರೆ. ಇನ್ನು ಹೊರಡೋಣವೇ?" ವಿನಯದಿಂದ ನುಡಿದರೂ ಅವಳ ಮಾತು ಕಟ್ಟುನಿಟ್ಟಾಗಿಯೇ ಇದ್ದಿತು.

ಬೆರಗಿನಿಂದ ಬಾಯಿಬಿಟ್ಟು ನಿಂತ ಅರ್ಚಕರು, "ಆ! ರಾಜಕುಮಾರಿಯೇ? ನಮ್ಮ ರಾಜಕುಮಾರಿ ವಿರೂಪಾಕ್ಷಿ ದೇವಿಯೇ?" ಎಂದು ಚಡಪಡಿಸಿದರು.

"ಅಮ್ಮ! ಒಂದು ನಿಮಿಷ ತಾಳು!" ಎನ್ನುತ್ತ ಗರ್ಭಗುಡಿಯಿಂದ ಸೋಮೇ ದೇವರು ಮುಡಿದಿದ್ದ ಮಲ್ಲೆಮಾಲೆಯನ್ನು ತಂದು ರಾಜಕುಮಾರಿಯ ಕೈಗಿತ್ತರು. ಒಂದು ಪೊಟ್ಟಣ ವಿಭೂತಿಯನ್ನು ಕೊಟ್ಟು, "ರಾಜಕುಮಾರಿ! ಇದು ರಕ್ಷೆ! ಯಾವಾಗಲೂ ಮಹಾರಾಜರ ಬಳಿಯೇ ಇರಲಿ. ಯಾವ ಕಂಟಕವೂ ಅವರ ಬಳಿ ಸುಳಿಯದಿರಲಿ" ಎಂದು ಗದ್ಗದಿತವಾದ ದನಿಯಲ್ಲಿ ನುಡಿದರು.

ರಾಜಕುಮಾರಿಯನ್ನು ಕಾಣಲೆಂದು ಜನ ಕೂಡುವ ಮುನ್ನ, ಅವಳನ್ನು ಪಲ್ಲಕ್ಕಿಯಲ್ಲಿ ಹತ್ತಿಸಿಕೊಂಡು ಹೊರಟುಬಿಟ್ಟಿತು ಅಶ್ವಾರೋಹಿಣಿಯರ ಸಣ್ಣ ಪಡೆ.

ವೇಗವಾಗಿ ಸಾಗುತ್ತಿದ್ದ ಪಲ್ಲಕ್ಕಿಯ ಪರದೆಯನ್ನು ಪಕ್ಕಕ್ಕೆ ಸರಿಸಿ ಹೊರಗೆ ಕಣ್ಣು ಹಾಯಿಸಿದಳು ವಿರೂಪಾಕ್ಷಿ.

ಅಸ್ತದ ಸಮಯ. ಇಡೀ ಆಕಾಶದಲ್ಲೆಲ್ಲ ವಿವಿಧ ಬಣ್ಣಗಳನ್ನು ಚೆಲ್ಲಿ ವಸಂತೋತ್ಸವ ಆಚರಿಸುತ್ತಿದ್ದ ಸೂರ್ಯದೇವ.

ಕ್ಷಣಕ್ಕೊಂದು ವಿನ್ಯಾಸ ರಚಿಸಿ ಆಕಾಶದಲ್ಲಿ ತೇಲಿ ಹೋದ ಹಕ್ಕಿಗಳ ಸಾಲು –

ಪುಟ್ಟ ಕೊಳಗಳಲ್ಲಿ ಮುದುಡ ತೊಡಗಿದ್ದ ನೈದಿಲೆ ಹೂವುಗಳು –

ಕೆರೆಯ ನೀರಿನಲ್ಲಿ ಆಟವಾಡಿ ಬಂದು ಮೈಮನ ತಣಿಸಿದ ತಂಗಾಳಿ –

ಸುತ್ತ ಮುತ್ತಣ ಪ್ರದೇಶಗಳಲ್ಲಿ ಹಸಿರು ಹಾಸಿದ ಹೊಲ ಗದ್ದೆಗಳು –

ಪರಿಮಳ ಸೂಸುವ ಮಲ್ಲಿಗೆ ಸೇವಂತಿಗೆಯ ಹೂದೋಟಗಳು –

ಹಾದು ಹೋಗುತ್ತಿದ್ದ ಪಲ್ಲಕ್ಕಿಯನ್ನು ಮಿಣಿ ಮಿಣಿ ನೋಡುತ್ತ ಮರಗಳ ರೆಂಬೆಗಳಲ್ಲಿ ಉಯ್ಯಾಲೆಯಾಡಿದ ಮರ್ಕಟಗಳು –

"ನೋಡು ಕಾಂತಿ ಇವುಗಳ ಚೇಷ್ಟೆಯನ್ನ! ಎಷ್ಟು ತಮಾಷೆಯಾಗಿದೆ!" ಎಂದ ವಿರೂಪಾಕ್ಷಿ ಕಿಲಕಿಲ ನಕ್ಕಳು.

"ಹೌದು ರಾಜಕುಮಾರಿ!"

ಸಖಿಯ ಸಪ್ಪೆಯಾದ ಉತ್ತರದಿಂದ ಬೇಸರಗೊಂಡಳು ವಿರೂಪಾಕ್ಷಿ.

ಎಂತಹ ಮನೋಲ್ಲಾಸಕರ ದೃಶ್ಯಗಳು! ಈಗ ಅಪ್ಪಾಜಿ ಜೊತೆಯಲ್ಲಿದ್ದಿದ್ದರೆ ಎಷ್ಟು ಹಾಸ್ಯ ಚುಟಕುಗಳನ್ನು ಹೇಳುತ್ತಿದ್ದರು! ಈ ಶಿವನಸಮುದ್ರದ ಸೀಮೆಯ ಚೆಲುವಿನ ಬಗ್ಗೆ ಕವಿತೆಯನ್ನೇ ರಚಿಸುತ್ತಿದ್ದರು. ಇಲ್ಲವೇ ಇಂತಹ ಸುಂದರ ದೃಶ್ಯಗಳನ್ನು ಕಂಡಾಕ್ಷಣ ಪಲ್ಲಕ್ಕಿಯಿಂದಿಳಿದು ಕುಂಚ